SEVA BHARATHI
सेवा ही परमो धर्मः

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ನವೆಂಬರ್ 2024

ಸಂಪುಟ : 05
ಸಂಚಿಕೆ : 11

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕಾಗಿ ಸೇವಾಭಾರತಿ ಕನ್ಯಾಡಿಯಲ್ಲಿ ನೂತನ ಕಟ್ಟಡದ ಭೂಮಿಪೂಜೆ ಮತ್ತು ಶಿಲಾನ್ಯಾಸ



## ಸೇವಾಭಾರತಿಯಿಂದ 2024 ರ 'ಸೇವಾಸಿಂಧು' ಪುರಸ್ಕಾರ

## ಉಜಿರೆಯ ರಬ್ಬರ್ ಸೊಸೈಟಿಯಿಂದ ಮಾದರಿ ಸೇವಾಕಾರ್ಯ

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಕೈಹಿಡಿದ ಆಟೋರಿಕ್ಷಾ

ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಒಂದು ಕಡೆ ಸಂಸ್ಥೆಗೆ 20ರ ಸಂಭ್ರಮ, ಇನ್ನೊಂದು ಕಡೆ ಕನ್ಯಾಡಿಯ ನಮ್ಮ ಜಾಗದಲ್ಲಿ ಕಟ್ಟಡ ನಿರ್ಮಾಣದ ತಯಾರಿ, ಅಲ್ಲದೆ ಬೈಂದೂರಿನಲ್ಲಿ ಪಡೆದ ಶಾಲೆಗೆ ಕಾಯಕಲ್ಪ. ಹೀಗೆ ಈ ತಿಂಗಳಲ್ಲಿ ಸ್ವಲ್ಪ ಒತ್ತಡದ ಕಾರ್ಯಗಳು.

ಸೇವಾಧಾಮದ ಕಟ್ಟಡ ನಿರ್ಮಾಣಕ್ಕಾಗಿ ಎಂಆರ್‌ಪಿಎಲ್‌ನವರು ನೆಲಮಹಡಿಗೆ ರೂಪಾಯಿ 42 ಲಕ್ಷದಷ್ಟು ಮಂಜೂರು ಮಾಡಿರುವುದು ಎಷ್ಟು ಖುಷಿಯೋ, ಬೇಸ್ಮೆಂಟಿಗೆ ಸುಮಾರು 65 ಲಕ್ಷದಷ್ಟು ಹಣವನ್ನು ಹೊಂದಿಸುವುದು ಹರಸಾಹಸವಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಸಂಘ ಸಂಸ್ಥೆಗಳನ್ನು ಕಂಡು ಮನವಿ ಸಲ್ಲಿಸಿದ್ದೇವೆ. ಮಠ ಮಂದಿರಗಳಿಗೆ ಬೇಡಿಕೆ ಸಲ್ಲಿಸಿದ್ದೇವೆ. ಅನೇಕ ಸಿಎಸ್‌ಆರ್ ತಂಡಕ್ಕೂ ನಮ್ಮ ಪ್ರಪೋಸಲ್ ಕಳುಹಿಸಿದ್ದೇವೆ. ಪರಿಣಾಮವನ್ನು ಕಾಯಬೇಕಿದೆ. ಅಂತು ಈ ಡಿಸೆಂಬರ್ ತಿಂಗಳಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಗಲೇಬೇಕಿದೆ.

ಪ್ರತಿ ತಿಂಗಳು ತನ್ನ ಆದಾಯದ ಭಾಗವನ್ನು ದೇಣಿಗೆಯನ್ನಾಗಿ ನೀಡುವಂತಹ ಸೇವಾನಿಧಿ ಯೋಜನೆಯಡಿಯಲ್ಲಿ ದೇಣಿಗೆದಾರರ ಸಂಖ್ಯೆಯನ್ನು ಹೆಚ್ಚು ಮಾಡುವುದರ ಜೊತೆ ಜೊತೆಯಾಗಿ ವೈಯಕ್ತಿಕ ದೇಣಿಗೆದಾರರನ್ನು ಭೇಟಿ ಮಾಡುವ ಕೆಲಸ ನಿರಂತರವಾಗಿ ನಡೆಯುತ್ತಿದೆ.

ಇನ್ನು ಬೈಂದೂರಿನ ಹೇನಬೇರು ಶಾಲೆಯಲ್ಲಿ 8 ಬೆಡ್‌ಗಳ ವ್ಯವಸ್ಥೆಯನ್ನು ಮಾಡುವಷ್ಟು ಸ್ಥಳಾವಕಾಶವಿದೆ. ಅಲ್ಲಿಯ ಕಟ್ಟಡ ನವೀಕರಣ, ರ್‍ಯಾಂಪ್ ಮಾಡುವ ಕಾರ್ಯ, ಶೌಚಾಲಯ ನಿರ್ಮಾಣ ಮತ್ತು ಬಣ್ಣ ಬಳಿಯುವ ಕಾರ್ಯಕ್ಕೂ ಅಂದಾಜು ವೆಚ್ಚ ತಯಾರಿಸುವ ಹಂತದಲ್ಲಿದ್ದೇವೆ. ಫೆಬ್ರವರಿ ತಿಂಗಳ ಒಳಗಾಗಿ ಕಟ್ಟಡದ ಇಷ್ಟು ಕೆಲಸ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಒಟ್ಟಿನಲ್ಲಿ 20 ರ ಸಂಭ್ರಮದಲ್ಲಿ ಕನ್ಯಾಡಿಯಲ್ಲೊಂದು ಭವ್ಯ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭ, ಬೈಂದೂರಿನಲ್ಲಿ ರಾಜ್ಯದ 2 ನೇ ಕೇಂದ್ರವಾಗಿ ಬೆನ್ನುಹುರಿ ಅಪಘಾತಕ್ಕೊಳಗಾದ ಒತ್ತಡ ಗಾಯವಿರುವಂತಹವರಿಗಾಗಿ ಗಾಯನಿರ್ವಹಣೆ ಹಾಗೂ ಪುನಶ್ಚೇತನ ಕೇಂದ್ರದ ಕಾರ್ಯಗಳು ಮೈದಾಳುತ್ತಿವೆ.

'ಸೇವೆಯೇ ಪರಮಧರ್ಮ'

ವಂದನೆಗಳೊಂದಿಗೆ



ಇತೀ ತಮ್ಮವ
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕಾಗಿ ಸೇವಾಭಾರತಿ ಕನ್ಯಾಡಿಯಲ್ಲಿ ನೂತನ ಕಟ್ಟಡದ ಭೂಮಿಪೂಜೆ ಮತ್ತು ಶಿಲಾನ್ಯಾಸ





**ಕನ್ಯಾಡಿ ಸೇವಾಭಾರತಿಯ 20ನೇ ವರ್ಷದ ಸಂಭ್ರಮದ ಅಂಗವಾಗಿ ಸೇವಾನಿಕೇತನದ ವಠಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡದ ಭೂಮಿಪೂಜೆ ಮತ್ತು ಶಿಲಾನ್ಯಾಸದ ಸಂದರ್ಭದಲ್ಲಿ "ಸೇವೆಯ ಮೂಲಕ ಸಮಾಜದಲ್ಲಿ ಪರಿವರ್ತನೆ ತರಬೇಕು ಎಂಬ ಪರಿಕಲ್ಪನೆಯಲ್ಲಿ ಸೇವಾಭಾರತಿ ದೇಶಾದ್ಯಂತ ಕಾರ್ಯ ಮಾಡುತ್ತಿದೆ. ಕನ್ಯಾಡಿಯಲ್ಲಿನ ಸೇವಾಭಾರತಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶಯದಂತೆ ಕೆಲಸ ಮಾಡುತ್ತಿದ್ದು ದೇಶಕ್ಕೇ ಮಾದರಿಯಾಗಿದೆ" ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಕಾರ್ಯವಾಹ ತಿಪ್ಪೇಸ್ವಾಮಿ ಶುಭಹಾರೈಸಿ ಕಟ್ಟಡದ ಭೂಮಿಪೂಜೆಯ ಸಂದರ್ಭದಲ್ಲಿ ಶಿಲಾನ್ಯಾಸ ನೆರವೇರಿಸಿದರು.**

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕೊಕ್ಕಡದಲ್ಲಿರುವ ಪುನಶ್ಚೇತನ ಕೇಂದ್ರ ರಾಜ್ಯಕ್ಕೇ ಮಾದರಿಯಾಗಿದೆ. ಇದೀಗ ವಿಸ್ತರಿತ ಸೇವೆಗಾಗಿ ಸೇವಾಭಾರತಿಯ 20 ನೇ ವರ್ಷದ ಸಂಭ್ರಮದಲ್ಲಿ ಎರಡು ಮಹತ್ವದ ಕಾರ್ಯಗಳನ್ನು ಆಯೋಜಿಸಲಾಗಿದೆ. ಬೈಂದೂರು ಕ್ಷೇತ್ರದ ಶಾಸಕ ಗುರುರಾಜ್ ಗಂಟಿಹೊಳೆ ಅವರ ನೇತೃತ್ವದಲ್ಲಿ ಒತ್ತಡಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರವನ್ನು ಕರ್ನಾಟಕದಲ್ಲಿ 2ನೇ ಕೇಂದ್ರವನ್ನಾಗಿ ಪ್ರಾರಂಭಿಸಲಿದೆ. ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ಕನ್ಯಾಡಿಯಲ್ಲಿ ಸರಕಾರದಿಂದ ಮಂಜೂರಾದ ಜಾಗದಲ್ಲಿ ನೂತನ ಕಟ್ಟಡದ ನಿರ್ಮಾಣದ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಕಟ್ಟಡದ ನೆಲಮಹಡಿಯ ನಿರ್ಮಾಣಕ್ಕಾಗಿ ಎಂಆರ್‌ಪಿಎಲ್ ಕಂಪೆನಿಯ ಸಿಎಸ್‌ಆರ್ ಫಂಡ್‌ನಿಂದ 42 ಲಕ್ಷ ರೂ. ಮಂಜೂರಾಗಿದೆ. ಇದು ರಾಷ್ಟ್ರಕ್ಕೆ ಮಾದರಿಯಾಗುವತ್ತ ಎಲ್ಲರ ಸಹಕಾರ ಬೇಕಾಗಿದೆ ಎಂದು ಸಂಸ್ಥೆಯ ಸ್ಥಾಪಕರಾದ ಕೆ. ವಿನಾಯಕ ರಾವ್ ಕನ್ಯಾಡಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಪ್ರತಾಪಸಿಂಹ ನಾಯಕ್, ಸೇವಾಭಾರತಿ ಕರ್ನಾಟಕ ದಕ್ಷಿಣಪ್ರಾಂತ ಕಾರ್ಯದರ್ಶಿ ಚನ್ನಯ್ಯಸ್ವಾಮಿ, ಬೆಳ್ತಂಗಡಿ ಮಾನ್ಯ ಶಾಸಕರಾದ ಹರೀಶ್ ಪೂಂಜಾ, ಧರ್ಮಸ್ಥಳ ಗ್ರಾ.ಪಂ. ಉಪಾಧ್ಯಕ್ಷರಾದ ಪಿ. ಶ್ರೀನಿವಾಸ್ ರಾವ್, ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶರತ್‌ಕೃಷ್ಣ ಪಡ್ವೆಟ್ನಾಯ, ಬೆಂಗಳೂರು ಕ್ಯಾಮ್ಸ್ ಕೋಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಹಿರಿಯ ಪ್ರಬಂಧಕರಾದ ನವೀನ್ ವಜ್ರವೇಲು, ಉಡುಪಿ ನಗರಸಭೆ ಸದಸ್ಯ ವಿಜಯ ಕೊಡವೂರು, ಆರೋಗ್ಯಮ್ ವಿಭಾಗದ ಸಂಚಾಲಕ ಶ್ರೀಧರ ಕೆ.ವಿ.. ಕನ್ಯಾಡಿ ಶ್ರೀ ದುರ್ಗಾ ಮಾತೃಮಂಡಳಿ ಅಧ್ಯಕ್ಷೆ ಶಾಂತಾ ಪಿ. ಶೆಟ್ಟಿ, ಎಸ್.ಎಲ್.ವಿ. ಕನ್‌ಸ್ಟ್ರಕ್ಷನ್ ಅಭಿಯಂತರ ಸಂಪತ್ ರತ್ನ ಎಸ್. ರಾವ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷ ಕೆ. ಕೃಷ್ಣಭಟ್ ಕೊಕ್ಕಡ, ಬೆಳ್ತಂಗಡಿ ತಾಲೂಕು ಪತ್ರಕರ್ತರ ಸಂಘದ ಚೈತ್ರೇಶ್ ಇಳಂತಿಲ, ಸೇವಾಭಾರತಿ ಉಪಾಧ್ಯಕ್ಷರಾಗಿ ಗಿರೀಶ್ ಕೆ.ಯು., ಕಾರ್ಯದರ್ಶಿ ಬಾಲಕೃಷ್ಣ ನೈಮಿಷ, ಟ್ರಸ್ಟಿಗಳಾದ ಕೃಷ್ಣಪ್ಪ ಗುಡಿಗಾರ್, ವಿಷ್ಣುಪ್ರಸಾದ್ ತೆಂಕಿಲ್ಲಾಯ, ಸೇವಾಧಾಮ ಸಂಚಾಲಕ ಕೆ. ಪುರಂದರ ರಾವ್, ಪೂರ್ವಾಧ್ಯಕ್ಷರಾದ ವತ್ಸಲ ಪಿ. ಉಪಸ್ಥಿತರಿದ್ದರು.

ಮಂಗಳೂರಿನ ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕ ಅರ್ಜುನ್ ಭಂಡಾರ್ಕರ್‌ರವರಿಗೆ ಸೇವಾಸಿಂಧು–2024 ನೀಡಿ ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸೇವಾಭಾರತಿ ಅಧ್ಯಕ್ಷೆ ಸ್ವರ್ಣಗೌರಿ ಸ್ವಾಗತಿಸಿದರು. ಡಾಕ್ಯುಮೆಂಟೇಶನ್ ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋ–ಆರ್ಡಿನೇಟರ್ ಸುಮ ನಿರೂಪಿಸಿ, ಹಿರಿಯ ಪ್ರಬಂಧಕರಾದ ಚರಣ್ ಕುಮಾರ್ ಎಂ. ಧನ್ಯವಾದವಿತ್ತರು.

# ಸೇವಾಭಾರತಿಯಿಂದ 2024 ರ "ಸೇವಾಸಿಂಧು" ಪುರಸ್ಕಾರ




ಕನ್ಯಾಡಿ ಸೇವಾಭಾರತಿಯ 20ನೇ ವರ್ಷದ ಸಂಭ್ರಮದ ಅಂಗವಾಗಿ ಸೇವಾನಿಕೇತನದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡದ ಭೂಮಿಪೂಜೆ ಮತ್ತು ಶಿಲಾನ್ಯಾಸದ ಸಂದರ್ಭದಲ್ಲಿ ಕಳೆದ 5 ವರ್ಷದಿಂದ ಜನರ ಅನುಕೂಲಕ್ಕಾಗಿ ಪ್ರತಿಫಲವನ್ನು ಬಯಸದೆ ಸಮಾಜಸೇವೆಯನ್ನು ಮಾಡುತ್ತಾ ಬಂದ ಮಂಗಳೂರಿನ ಸೇವ್‌ಲೈಫ್ ಚಾರಿಟೇಬಲ್ ಟ್ರಸ್ಟಿನ ಸಂಸ್ಥಾಪಕರಾದ ಶ್ರೀ ಅರ್ಜುನ್ ಭಂಡಾರ್ಕರ್‌ರವರು ಸಮಾಜದ ಅಶಕ್ತರಿಗೆ ಚಿಕಿತ್ಸೆ, ಶೈಕ್ಷಣಿಕ, ಮನೆ ನಿರ್ಮಾಣ ಹಾಗೂ ಹಲವು ರೀತಿಯ ಸಾಮಾಜಿಕ ನೆರವುಗಳನ್ನು ಮಾಡುತ್ತ ಜನರ ಬಾಳಲ್ಲಿ ಆಶಾಕಿರಣವಾಗಿದ್ದಾರೆ.

ಹಲವಾರು ಕ್ಷೇತ್ರದಲ್ಲಿ ಮಾಡಿದ ಅನುಪಮ ಸಾಧನೆಯನ್ನು ಪರಿಗಣಿಸಿ ಸೇವಾಭಾರತಿ ಸಂಸ್ಥೆಯ ವತಿಯಿಂದ "ಸೇವಾಸಿಂಧು – 2024" ಗೌರವವನ್ನು ನೀಡಿ ಸನ್ಮಾನಿಸಲಾಯಿತು.

# ಉಜಿರೆಯ ರಬ್ಬರ್ ಸೊಸೈಟಿಯಿಂದ ಮಾದರಿ ಸೇವಾಕಾರ್ಯ





ಬೆಳ್ತಂಗಡಿ ತಾಲೂಕು, ರಬ್ಬರ್ ಗ್ರೋವರ್ಸ್ ಮಾರ್ಕೆಟಿಂಗ್ ಮತ್ತು ಪ್ರೊಸೆಸಿಂಗ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀಧರ್ ಬಿಡೆ, ಉಪಾಧ್ಯಕ್ಷರಾದ ಅನಂತ್ ಭಟ್ ಮಚ್ಚಿಮಲೆ, ಕಾರ್ಯನಿರ್ವಹಣಾಧಿಕಾರಿಯವರಾದ ರಾಜು ಶೆಟ್ಟಿ ಇವರ ತಂಡವು ಕನ್ಯಾಡಿಯ ಸೇವಾನಿಕೇತನಕ್ಕೆ ಭೇಟಿ ನೀಡಿ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ಸೊಸೈಟಿಯಿಂದ ರೂ. 50,000 ದ ಚೆಕ್ ನೀಡಿ ಕಟ್ಟಡದ ನಿರ್ಮಾಣ ಶೀಘ್ರ ನೆರವೇರುವಂತೆ ಶುಭಹಾರೈಸಿದರು. ಸೇವಾಭಾರತಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಸಿಬ್ಬಂದಿಯೊಂದಿಗೆ ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

*I dont need easy, I just need possible*

## ಸೇವಾನಿಧಿ ದಾನಿಗಳು

ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ., ನೇತ್ರಾವತಿ
ಶ್ರೀ ಮಧುಸೂದನ್ ಎಂ.ಜಿ., ಉಜಿರೆ
ಶ್ರೀ ಬಿ. ಪುರಂದರ, ನಾರ್ಯ
ಶ್ರೀ ರಜತ್ ಕುಮಾರ್ ಜೆ.ಡಿ., ವೇಣೂರು
ಶ್ರೀ ಅದ್ವೈತ್ ಪೈ, ಕನ್ಯಾಡಿ
ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ರಾಮದಾಸ್ ಭಂಡಾರ್ಕರ್, ಹಳೆಪೇಟೆ
ಶ್ರೀ ಪುರುಷೋತ್ತಮ್ ಡಿ.ಎ., ಧರ್ಮಸ್ಥಳ
ಶ್ರೀ ಶಿವಕುಮಾರ್ ಆರ್ಟ್ಸ್, ಹಳೆಪೇಟೆ
ಶ್ರೀ ಸುನಿಲ್ ಕುಮಾರ್ ಜೈನ್, ನೇತ್ರಾವತಿ
ಡಾ. ರಾಮಕೃಷ್ಣ ಭಟ್, ಕನ್ಯಾಡಿ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಜಯಾನಂದ ಎಂ, ಕನ್ಯಾಡಿ
ಶ್ರೀ ಮದ್ವಮೂರ್ತಿ, ಉಡುಪಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ವೆಲ್ವೆಟ್ ಟ್ರಾವೆಲ್ಸ್, ಬೆಂಗಳೂರು
ಸಂತೃಪ್ತಿ ಆರ್ ಪಡ್ಕೆ, ಕೆಲ್ಲಾಗುತ್ತು
ಶ್ರೀ ಬಾಲಕೃಷ್ಣ ರಾವ್, ಕನ್ಯಾಡಿ
ಶ್ರೀ ಕೆ. ಪುರಂದರ ರಾವ್, ದೊಂಡೋಲೆ
ಶ್ರೀಮತಿ ಜಯಂತಿ ಪಿ. ರಾವ್, ದೊಂಡೋಲೆ
ಶ್ರೀ ಸಂತೋಷ್ (ಸ್ವಸ್ತಿಕ್ ಸ್ಟೋರ್), ಕೊಕ್ಕಡ
ಶ್ರೀ ಸುಹಾಸ್ ಅಲೆಕ್ಕಾಡಿ
ಶ್ರೀಮತಿ ದಿವ್ಯಾಪುರಂದರ ಬೆಂಗಳೂರು
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಬೇಬಿ ಶ್ರೀ ಬಿಲ್ವಾನಿ, ಉಜಿರೆ
ಶ್ರೀ ಬಾಲಸುಬ್ರಮಣ್ಯ, ಬೆಂಗಳೂರು
ಶ್ರೀ ಸುರೇಂದ್ರ ಕುಡುವ, ಉಜಿರೆ
ಶ್ರೀ ಜಿ. ಪುಟ್ಟಸ್ವಾಮಿ, ಉಜಿರೆ
ಶ್ರೀ ನೀಲಕಂಠ, ನಾರ್ಯ
ಶ್ರೀ ಗಣೇಶ್ ಭಟ್, ಉಜಿರೆ
ಶ್ರೀ ಶೆಲ್ಡನ್ ಮೋನಿಶ, ಮದ್ದಡ್ಕ



## ರಿಯಾಯಿತಿ ದರದಲ್ಲಿ ಗಾಳಿಯ ಹಾಸಿಗೆ ವಿತರಣೆ

ಶ್ರೀ ಪನ್ನಗ ಶೆಟ್ಟಿ
ಬೈಂದೂರು

## ವಸ್ತು ರೂಪದಲ್ಲಿ ದೇಣಿಗೆ ನೀಡಿದವರು

ಹವ್ಯಕ ವಲಯ ಉಜಿರೆ
ಶ್ರೀ ಮೇಲೂರು ದೇವರಾಜ್, ಬೆಂಗಳೂರು
ಅಮೃತ ಶಿಶುನಿವಾಸ, ಬೆಂಗಳೂರು

## ಮಹನೀಯ ದಾನಿಗಳು

ಶ್ರೀ ಸದಾಶಿವ ಹಾಸನ
ಶ್ರೀ ಹರೀಶ್
ಡಾ. ಎ. ಜಯಕುಮಾರ್ ಶೆಟ್ಟಿ, ಅರ್ಕುಲಬೀಡು
ಶ್ರೀ ರಾಜಪ್ರಸಾದ ಎಂ. ಪಿ., ಉಜಿರೆ
ರಬ್ಬರ್ ಗ್ರೋವರ್ಸ್ ಮಾರ್ಕೆಟಿಂಗ್ ಮತ್ತು ಪ್ರೊಸೆಸಿಂಗ್
ಕೋ– ಆಪರೇಟಿವ್ ಸೊಸೈಟಿ ಲಿಮಿಟೆಡ್, ಉಜಿರೆ
ಶ್ರೀಮತಿ ವಸಂತಿ ಮತ್ತು ಶ್ರೀ ರಾಮಣ್ಣ ಗುಡಿಗಾರ್, ಕನ್ಯಾಡಿ
ಶ್ರೀ ಗಣೇಶ್ ಪಿ. ಐತಾಳ್, ಕೊಕ್ಕಡ
ಶ್ರೀ ಯೋಗೀಶ್ ಆರ್. ಭಿಡೆ, ಲಾಯಿಲ
ಶ್ರೀ ಸತ್ಯನಾರಾಯಣ ರಾವ್, ನಿಡ್ಲೆ
ಪೇಜಾವರ ಮಠ, ಉಡುಪಿ
ಶ್ರೀ ಮಹಾಲಕ್ಷ್ಮಿ ಸೇವಾ ಪ್ರತಿಷ್ಠಾನ, ಮಾಣಿಲ
ಶ್ರೀ ಜಗದೀಶ್ ಅಂಚನ್, ಮಲ್ವೆ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು ಆದಂ ಮೂಲತಃ ಬಂಟ್ವಾಳ ತಾಲೂಕಿನ ಕೊಂಕಣಪದವು ಮನೆ. ನಾನು ಮೇ 4 ರಂದು ಸೇವಾಧಾಮಕ್ಕೆ ಬಂದಿರುತ್ತೇನೆ. ನಾನು 2023ರ ಅಕ್ಟೋಬರ್ 4 ರಂದು ಬೆಂಗಳೂರಿನಿಂದ ವಿಟ್ಲ ಸಮೀಪದ ಒಡಿಯೂರಿಗೆ ಗ್ರಾನೆಟ್ಸ್ ಸಾಗಿಸುವಾಗ ಲಾರಿ ಪಲ್ಟಿಯಾಗಿ ನಾನು ಬೆನ್ನುಹುರಿ ಅಪಘಾತಕ್ಕೊಳಗಾಗಿರುತ್ತೇನೆ. ನಂತರ ತೇಜಸ್ವಿನಿ ಆಸ್ಪತ್ರೆಯಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದು ನಂತರ ಆರು ತಿಂಗಳುಗಳ ಕಾಲ ಮನೆಯಲ್ಲಿ ಸಣ್ಣಪುಟ್ಟ ವ್ಯಾಯಾಮ ಮಾಡಿಕೊಂಡು ವಿಶ್ರಾಂತಿಯಲ್ಲಿದ್ದೆ. ನಂತರ ಸೇವಾಧಾಮಕ್ಕೆ ಬಂದೆ, ಬರುವಾಗ ಮಲಗಿ ಬಂದಿರುತ್ತೇನೆ. ನಂತರ ಇಲ್ಲಿ ಫಿಸಿಯೋಥೆರಪಿಯನ್ನು ತೆಗೆದುಕೊಂಡು ಈಗ ವಾಕರ್‌ನ ಸಹಾಯದಿಂದ ನಡೆಯುತ್ತಿದ್ದೇನೆ.

ಇಲ್ಲಿನ ಫಿಸಿಯೋಥೆರಪಿಗಳಾದ ಗಣೇಶ್ ಕಾರ್ತಿಕ್ ಹಾಗೂ ಸುರಕ್ಷಾ ಮೇಡಂ ನಮಗೆ ತುಂಬಾ ಕ್ರಮವಹಿಸಿದ ಅವರಿಗೆ ನಾನು ಅಭಾರಿಯಾಗಿದ್ದೇನೆ. ಈಗ ಒಂದು ವಾರದಿಂದ ನನ್ನನ್ನು ಸ್ಟೆಪ್ನಲ್ಲಿ ಮೇಲೆ ಕರೆದುಕೊಂಡು ಹೋಗಿದ್ದಾರೆ. ಹಾಗೂ ವಿವಿಧ ರೀತಿಯ ವ್ಯಾಯಾಮದ ಮೂಲಕ ಹೊಸ ಪ್ರಯೋಜನ ಪಡೆದುಕೊಂಡಿರುತ್ತೇನೆ. ಇದಕ್ಕೆ ನಿಜವಾಗಿ ಫಿಸಿಯೋಥೆರಪಿಗಳು ಕಾರಣರಾಗಿದ್ದಾರೆ. ಹಾಗೂ ಸೇವಾಧಾಮದ ಸಹಭಾಗಿಗಳು ಹಾಗೂ ಜೊತೆಯಾಗಿರುವವರು ತುಂಬಾ ಚೆನ್ನಾಗಿ ಹೊಂದಿಕೊಂಡು ಹೋಗಿರುವುದು ಸಂತೋಷವಾಗಿದೆ. ಎಲ್ಲರಿಗೂ ಶುಭವಾಗಲಿ ಎಂದು ಹಾರೈಸುತ್ತಾ ನನ್ನ ಅನಿಸಿಕೆ ಮುಗಿಸುತ್ತಿದ್ದೇನೆ.

ಇಂತಿ ನಿಮ್ಮ ವಿಶ್ವಾಸಿ
**ಆದಂ**

*The world worries about disability more than disabled people do*

# ಸೇವಾಧಾಮದಲ್ಲಿ ಯೋಗ ತರಬೇತಿ





ಸೌತಡ್ಕದ ಸೇವಾಧಾಮ, ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸ್‌ನ ವಿದ್ಯಾರ್ಥಿಗಳು ಕೇಂದ್ರದ ಸನಿವಾಸಿಗಳಿಗೆ ಹಾಗೂ ಆರೈಕೆದಾರರಿಗೆ, ಆರೋಗ್ಯಕರ ಜೀವನ ಶೈಲಿಯನ್ನು ಕಾಪಾಡಿಕೊಳ್ಳುವಲ್ಲಿ ಯೋಗದ ಮಹತ್ವವನ್ನು ತಿಳಿಸಿ, ವಿವಿಧ ಆಸನಗಳ ಯೋಗಾಭ್ಯಾಸವನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ 9 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, 9 ಮಂದಿ ಆರೈಕೆದಾರರು ಭಾಗವಹಿಸಿದ್ದರು.

ಪುನಶ್ಚೇತನ ಕೇಂದ್ರದ ಅಸಿಸ್ಟೆಂಟ್ ಫಿಸಿಯೋಥೆರಪಿಸ್ಟ್ ಕೃತಿಕಾ ಹಾಗೂ ಪೀರ್ ಟ್ರೈನರ್ ಆಂಟೋನಿ ಉಪಸ್ಥಿತರಿದ್ದರು.

## ವಿಶಿಷ್ಟ ರೀತಿಯಲ್ಲಿ ಸಮಾಜಕ್ಕೆ ಮಾದರಿಯಾದ ನವಜೋಡಿಗಳು



ಕನ್ಯಾಡಿಯ ಶ್ರೀರಾಮ ನಿಲಯದ ಶ್ರೀಮತಿ ವಸಂತಿ ಮತ್ತು ಶ್ರೀ ರಾಮಣ್ಣ ಗುಡಿಗಾರರು ಮಗಳ ಶುಭವಿವಾಹದ ಆರತಕ್ಷತೆಯ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ರೂ. 25,000 ಮೊತ್ತವನ್ನು ನೀಡಿ ಶುಭಹಾರೈಸಿದರು.

ಸೇವಾಭಾರತಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಸಿಬ್ಬಂದಿಯೊಂದಿಗೆ ಸ್ವೀಕರಿಸಿ. ನವ ವಧುವರರಿಗೆ ಶುಭಹಾರೈಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ, ಟ್ರಸ್ಟಿ ಶ್ರೀ ಕೃಷ್ಣಪ್ಪ ಗುಡಿಗಾರ್ ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ವಿಶೇಷ ರೀತಿಯಲ್ಲಿ 50ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಯೋಗೀಶ್ ಆರ್. ಬಿಢೆ




ಬೆಳ್ತಂಗಡಿಯ ಆಭರಣ ಜುವೆಲ್ಲರ್ಸ್ ಪ್ರಿಮಾಯ್ಸ್‌ನಲ್ಲಿ ಯೋಗೀಶ್ ಬಿಢೆ ತನ್ನ 50ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿ ಕೊಳ್ಳುವ ಜೊತೆಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ರೂ. 10,000 ಮೊತ್ತವನ್ನು ನೀಡಿ ತನ್ನ ಹುಟ್ಟುಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ. ಸೇವಾಭಾರತಿ ಸಂಸ್ಥೆಯ ಹಿರಿಯ ಪ್ರಬಂಧಕರಾದ ಚರಣ್ ಕುಮಾರ್ ಎಂ. ಇದನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಶುಭಹಾರೈಸಿ, ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಧರ್ಮಪತ್ನಿ ರಶ್ಮಿಯೋಗೀಶ್ ಬಿಢೆ, ದಕ್ಷಿಣಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಕುಸುಮಾಧರ್, ಆಭರಣ ಜುವೆಲ್ಲರ್ಸ್‌ನ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ



ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ನವೆಂಬರ್ ತಿಂಗಳಿನಂದು K S ಹೆಗ್ಡೆ ಆಸ್ಪತ್ರೆಯ PMR ವಿಭಾಗದ ಡಾ। ಸುಶೀಲ್ ಸೇವಾಧಾಮಕ್ಕೆ ಭೇಟಿ ನೀಡಿ ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 10 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ನವೆಂಬರ್ ತಿಂಗಳ ಸೇವಾ ಕಾರ್ಯಗಳು

1. ಗಾಳಿಹಾಸಿಗೆ – 1


## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 3 ತಿಂಗಳ ಪುನಶ್ಚೇತನವನ್ನು ಪಡೆದುಕೊಂಡು ನವೆಂಬರ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಶ್ರೀ ವಿನಯ್, ಶಿರಸಿ

## ಸೇವಾ ಸಂಗಮ ಆನ್‌ಲೈನ್ ಕಾರ್ಯಗಾರ



ನವೆಂಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕುಮಾರಿ ಐಶ್ವರ್ಯ ಎಸ್. ಸಮನ್ವಯಾಧಿಕಾರಿ, UDID ಭಾರತ ಸರ್ಕಾರ ಯೋಜನೆ , ಕರ್ನಾಟಕ ಸರ್ಕಾರ ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ UDID ಪೋರ್ಟಲ್ ಬಗೆಗಿನ ನವೀಕರಣಗೊಂಡ ಸಂಪೂರ್ಣ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 62 ಮಂದಿ ಭಾಗವಹಿಸಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಬಿ. ಪುರಂದರ
ನಾರ್ಯ




ಶ್ರೀ ನಾಗಾರ್ಜುನ ಡಿ.ಎ
ತುಮಕೂರು



ಶ್ರೀ ಯೋಗೀಶ್ ಆರ್. ಬಿಢೆ
ಲಾಯಿಲ



ಶ್ರೀ ಅಣ್ಣು ದೇವಾಡಿಗ
ನೇತ್ರಾವತಿ



ಶ್ರೀ ಹರ್ಷ ಕೆ.ಎಸ್
ಕಲ್ಯಾಡಿ



ಶ್ರೀಮತಿ ಕವಿತಾ ಎಂ.ಪಿ.
ಬೆಂಗಳೂರು



ಶ್ರೀಮತಿ ಮಧುರಾಣಿ
ಬೆಂಗಳೂರು




ಶ್ರೀ ಪ್ರಭಾಕರ ಹೆಗ್ಡೆ
ಉಜಿರೆ



ಶ್ರೀ ಸುಹಾಸ್ ಅಲೆಕ್ಕಾಡಿ
ಸುಳ್ಯ



ಶ್ರೀ ಸುನೀಲ್
ಕನ್ಯಾಡಿ



ಶ್ರೀ ವಿರುಪಾಕ್ಷ ಹಾದಿಮನಿ
ಬೆಳಗಾಂ





ಶ್ರೀ ಮೈಲಾರಿ ಪಿ.ಸಿ
ಧರ್ಮಸ್ಥಳ



ಶ್ರೀ ಗಣೇಶ್ ಪಿ. ಐತಾಳ್
ಕೊಕ್ಕಡ



## ನಿಮಗಿದು ತಿಳಿದಿರಲಿ

### ಇಂದ್ರಿಯಗಳು ಮತ್ತು ಗ್ರಹಿಕೆ:

1. **20/20 ದೃಷ್ಟಿ:** ಮಾನವನ ಕಣ್ಣು 10 ಮಿಲಿಯನ್ ಗಿಂತಲೂ ಹೆಚ್ಚು ವಿಭಿನ್ನ ಬಣ್ಣಗಳ ನಡುವೆ ವ್ಯತ್ಯಾಸವನ್ನು ತೋರಿಸುತ್ತದೆ.
2. **340,000 ಶಬ್ದಗಳು:** ಮಾನವನ ಕಿವಿಯು ಬೆರಗುಗೊಳಿಸುವ 340,000 ವಿಭಿನ್ನ ಶಬ್ದಗಳನ್ನು ಪತ್ತೆ ಮಾಡುತ್ತದೆ.
3. **1 ಟ್ರಿಲಿಯನ್‌ವಾಸನೆ:** ಮಾನವನ ಮೂಗು ನಂಬಲಾಗದ 1 ಟ್ರಿಲಿಯನ್ ವಿಭಿನ್ನ ಪರಿಮಳಗಳನ್ನು ಪತ್ತೆ ಮಾಡುತ್ತದೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

### Support us for constructions of Rehabilitation Centre

A/c Name : Sevabharathi
A/c No : 139322010000383
IFSC : UBIN0913936
Account Type : Savings Account
Union Bank of India, UJIRE Branch

*We are put in situations to build our character... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಕೈ ಹಿಡಿದ ಆಟೋರಿಕ್ಷಾ

ಜೀವನವೆಂಬ ಸೋಲು – ಗೆಲುವಿನ ಆಟದಲ್ಲಿ ಗೆದ್ದು ವಿಧಿಯಾಟದಿಂದ ಸೋತರೂ ಮತ್ತೆ ಛಲಬಿಡದೆ ತ್ರಿವಿಕ್ರಮನಂತೆ ಗೆಲುವಿನತ್ತ ನಡೆದು ಎರಡು ವರ್ಷದಿಂದ ಆಟೋರಿಕ್ಷವನ್ನು ಚಲಾಯಿಸಿ ಸ್ವಉದ್ಯೋಗವನ್ನು ಮಾಡುತ್ತಿರುವ ರಘು ಸಿ.ಎಚ್. ಇವರ ಯಶೋಗಾಥೆ.




ರಘು ಸಿ.ಎಚ್. ಮೂಲತಃ ಸಕಲೇಶಪುರದವರಾಗಿದ್ದು, ಶ್ರೀ ಹೊನ್ನೇಗೌಡ ಮತ್ತು ಶ್ರೀಮತಿ ಸರೋಜಮ್ಮ ದಂಪತಿಯ ಪುತ್ರರಾಗಿ 24 ಆಗಸ್ಟ್ 1983 ರಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸರಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಚಿನ್ನಳ್ಳಿಯಲ್ಲಿ ಪೂರ್ಣಗೊಳಿಸಿದರು ನಂತರ ಪ್ರಾಥಮಿಕ ಶಿಕ್ಷಣವನ್ನು ಮಲ್ಲೇಶ್ವರ ಪ್ರೌಢಶಾಲೆ ಒಡಳಹಳ್ಳಿಯಲ್ಲಿ ಮುಗಿಸಿ ಸಕಲೇಶಪುರದಲ್ಲಿ ಪಿಯುಸಿ ಶಿಕ್ಷಣವನ್ನು ಪಡೆದುಕೊಂಡರು. ಮೈಸೂರಿನ ಓಪನ್ ಯೂನಿವರ್ಸಿಟಿ, ಬಿ.ಎ. ಶಿಕ್ಷಣವನ್ನು ಪಡೆದುಕೊಂಡರು. ತದನಂತರ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. 2014 ರಲ್ಲಿ ವೈವಾಹಿಕ ಜೀವನವನ್ನು ಪ್ರಾರಂಭಿಸಿದರು. ಹೀಗೆ ಚಿಕ್ಕ ಸಂಸಾರದೊಂದಿಗೆ ಜೀವನ ಸಾಗಿಸುತ್ತಿದ್ದ ಸಂದರ್ಭದಲ್ಲಿ ಒಂದು ದುರಂತ ಸಂಭವಿಸಿತು.

1 ನವೆಂಬರ್ 2019 ರಂದು ಮರದ ರೆಂಬೆಕೊಂಬೆಗಳನ್ನು ಕಡಿಯುವ ವೇಳೆ ಮರದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದರು. ತದನಂತರ ಮಂಗಳೂರಿನ ಮಂಗಳ ಕಿಡ್ನಿ ಫೌಂಡೇಶನ್ ಮಂಗಳೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದಾಗ ಬೆನ್ನುಹುರಿ ಅಪಘಾತಕ್ಕೊಳಗಾಗಿದ್ದೇನೆ ಎಂಬ ವಿಷಯ ತಿಳಿದು ಜೀವನದ ಭರವಸೆಯನ್ನೇ ಕಳೆದುಕೊಂಡಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬೆನ್ನೆಲುಬಾಗಿ ನಿಂತವರು ರಘು ಅವರ ಸ್ನೇಹಿತರು ಮತ್ತು ಧರ್ಮಪತ್ನಿ ಸುಕನ್ಯಾ.

ಹೆಚ್ಚಿನ ಚಿಕಿತ್ಸೆಗಾಗಿ ಧರ್ಮಸ್ಥಳ ಆಯುರ್ವೇದ ಆಸ್ಪತ್ರೆಗೆ ಭೇಟಿ ನೀಡಿದರು ಎರಡು – ಮೂರು ತಿಂಗಳುಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡು ಗುಣಮುಖರಾಗದೆ ತದನಂತರ ಶಸ್ತ್ರಚಿಕಿತ್ಸೆ ಮಾಡಿದ ಡಾಕ್ಟರ್ ಈಶ್ವರಕೀರ್ತಿ ಅವರ ಸಲಹೆಯಂತೆ ಸೌತಡ್ಕದ, ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಬಂದು ಶ್ರೀ ಕೆ. ವಿನಾಯಕ ರಾವ್‌ರವರನ್ನು ಭೇಟಿ ಮಾಡಿದರು. ವಿನಾಯಕ ರಾವ್‌ರವರಿಂದ ಮೌಲ್ಯಾಧಾರಿತ ಸಲಹೆಗಳನ್ನು ಪಡೆದುಕೊಂಡರು. ಜೀವನದಲ್ಲಿ ಹುಮ್ಮಸ್ಸನ್ನೇ ಕಳೆದುಕೊಂಡಂತಹ ವ್ಯಕ್ತಿ ಅನಂತರದಲ್ಲಿ ಸೇವಾಧಾಮದಲ್ಲಿ ಎರಡು ತಿಂಗಳ ಕಾಲ ಪುನಶ್ಚೇತನವನ್ನು ಪಡೆದುಕೊಂಡು ಜೀವನದಲ್ಲಿ ಭರವಸೆಯನ್ನು ಕಂಡುಕೊಂಡರು. ನನ್ನ ಜೀವನದಲ್ಲಿ ಪುನರ್ಜನ್ಮವನ್ನು ನೀಡಿರುವುದೇ "ಸೇವಾಧಾಮ" ಎಂಬ ಮಾತಿನ ಮೂಲಕ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಾರೆ ರಘುರವರು.

ಹೀಗೆ ಮುಂದೆ ಜೀವನೋಪಾಯಕ್ಕೆ ಏನಾದರೂ ಉದ್ಯೋಗ ಮಾಡಬೇಕೆಂದು ಯೋಚಿಸುತ್ತಿದ್ದ ಸಂದರ್ಭದಲ್ಲಿ ರಿಕ್ಷಾ ಖರೀದಿಸಿ ದುಡಿಮೆಗೆ ಮುಂದಾದರು. ಕಳೆದ ಎರಡು ವರ್ಷಗಳಿಂದ ಆಟೋ ಚಾಲನ ಸಂದರ್ಭದ ವೇಳೆಯೂ ಆಕ್ಸಿಡೆಂಟ್ ಆಗಿ ಅನೇಕ ಕಷ್ಟಗಳನ್ನು ಸಹ ಎದುರಿಸಿದರು. ಜೀವನದಲ್ಲಿ ಹಿಡಿದ ದಾರಿಯನ್ನು ಎಂದಿಗೂ ಬಿಡಬಾರದು, ಕುಗ್ಗಬಾರದು ಎಂಬ ಧ್ಯೇಯವನ್ನು ಇಟ್ಟುಕೊಂಡು ಗುಣಮುಖರಾದ ನಂತರ ಪುನಃ ರಿಕ್ಷಾಚಾಲಕರಾಗಿ ಕೆಲಸವನ್ನು ಮಾಡುತ್ತ ವಿಜಯ ಪಥದ ಕಡೆಗೆ ಜೀವನವನ್ನು ಸಾಗಿಸುತ್ತಿದ್ದಾರೆ. ಅವರ ಯಶಸ್ಸಿನ ಜೀವನಕ್ಕೆ ಶುಭ ಹಾರೈಸೋಣ.